ಪಿ ಡಬ್ಲ್ಯೂಃ 1

ದಿನಾಂಕ 21-06-2023 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎನ್.ಬಿ.ಎ. ವಕೀಲರಿಂದಃ**

ನಾನು ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಹಾಜರಪಡಿಸಿದ್ದು ಅದರಲ್ಲಿ ಬರೆದ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದನ್ನು ಬರೆಯಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ. ಈ ಕೆಳಕಂಡಂತೆ ದಾಖಲೆಗಳನ್ನು ಹಾಜರಪಡಿಸುತ್ತಿದ್ದೇನೆ.

2. ದಿನಾಂಕ 19-06-2020 ರಂದು ಮುದೇನೂರು ಗ್ರಾಮ ಪಂಚಾಯತಿಯವರು ನೀಡಿದ 5 ಆಸ್ತಿ ಧೃಢೀಕರಣ ಪತ್ರಗಳನ್ನು **ನಿಪಿ 1** ರಿಂದ **ನಿಪಿ 5** ಎಂದು, ಸಾಕ್ಷಿದಾರರ ತಾತ ಹಾಗೂ ಅಜ್ಜಿಯ ಮರಣ ಪ್ರಮಾಣ ಪತ್ರಗಳನ್ನು **ನಿಪಿ 6** ಮತ್ತು **ನಿಪಿ 7** ಎಂದು, ಸಾಕ್ಷಿದಾರರ ದೊಡ್ಡಪ್ಪ ದುರ್ಗಪ್ಪ ಹಾಗೂ ನಾಗಪ್ಪ ರವರ ಮರಣ ಪ್ರಮಾಣ ಪತ್ರಗಳನ್ನು **ನಿಪಿ 8** ಮತ್ತು **ನಿಪಿ 9** ಎಂದು, ಸಾಕ್ಷಿದಾರರ ತಂದೆ ಹನುಮಪ್ಪ ರವರ ಮರಣ ಪ್ರಮಾಣ ಪತ್ರವನ್ನು **ನಿಪಿ 10** ಎಂದು ಗುರುತಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

ತೆ.ನ್ಯಾದಲ್ಲಿ ಬೆ.ಮಾಡಲಾಯಿತು. ನನ್ನ ಸಮಕ್ಷಮ

ಸಹಿ

ಓ ಹೇ ಕೆ ಸರಿ ಇದೆ. ಪ್ರಧಾನ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.